
೬

# ಐಡಿಯಾಸ್ : ಸ್ಪೀಕಿಂಗ್ ಅಂಡ್ ಲಿಸನಿಂಗ್ ಆಕ್ಟಿವಿಟೀಸ್ – ಲಿಯೋ ಜೋನ್ಸ್

– ಸುರಂಜನಾ ಬರುವಾ




ಲೇಖಕ: ಲಿಯೋ ಜೋನ್ಸ್
ವರ್ಷ: 1987
ಪ್ರಕಟನೆ: ಕೇಂಬ್ರಿಜ್ಡ್ ಯೂನಿವರ್ಸಿಟಿ ಪ್ರೆಸ್:
ಐಎಸ್‌ಬಿಎನ್: ISBN 0521 270812

**Ideas:** Speaking and Listening Activities for Upper-intermediate Students By Leo Jones

ಪುಸ್ತಕ: ಐಡಿಯಾಸ್ : ಸ್ಪೀಕಿಂಗ್ ಅಂಡ್ ಲಿಸನಿಂಗ್ ಆಕ್ಟಿವಿಟೀಸ್

ಸಾರಾಂಶ: ಇದರ ಶೀರ್ಷಿಕೆಯಲ್ಲಿಯೇ ತಿಳಿಸಿರುವಂತೆ ಮಾತನಾಡುವ ಹಾಗೂ ಆಲಿಸುವ ಚಟುವಟಿಕೆಗಳನ್ನು ಇಲ್ಲಿ ಪ್ರಸ್ತಾವಿಸಲಾಗಿದೆ. ಪ್ರಾಥಮಿಕ ಹಾಗೂ ಪ್ರೌಢಶಾಲಾ ತರಗತಿಗಳಲ್ಲಿ

**ಭಾಷಾಬೋಧನೆ ಮಾಡುವ ಶಿಕ್ಷಕರಿಗೆ ಇದು ಬಹಳ ಉಪಯುಕ್ತವಾಗಿದೆ. ಶಿಕ್ಷಕರು ಕೈಗೊಳ್ಳುವ ಮಾತನಾಡುವ ಮತ್ತು ಆಲಿಸುವ ಚಟುವಟಿಕೆಗಳಿಗೆ ಪೂರಕವಾಗಿ ವಿದ್ಯಾರ್ಥಿಗಳು ತಮ್ಮ ಆಲೋಚನೆಗಳು, ಅಭಿಪ್ರಾಯಗಳು ಮತ್ತು ಅನುಭವಗಳನ್ನು ಪರಸ್ಪರ ಹಂಚಿಕೊಳ್ಳಲು ಇರುವ ಸಾಧ್ಯತೆಗಳನ್ನು ಈ ಪುಸ್ತಕವು ಪ್ರೋತ್ಸಾಹಿಸುತ್ತದೆ.**

**ಪ್ರಮುಖ ಪದಗಳು: ಸಂವಹನ ಕೌಶಲಗಳು–communication skills, ಮಾತನಾಡುವುದು ಹಾಗೂ ಆಲಿಸುವಿಕೆಯ ಚಟುವಟಿಕೆಗಳು– Speaking and Listening Activities, ವಿಚಾರಗಳು– ideas.**

ಕಲಿಕೆಯಲ್ಲಿ ವಿದ್ಯಾರ್ಥಿಗಳನ್ನು ತಲ್ಲೀನಗೊಳಿಸುವ ಮತ್ತು ಆನಂದಿಸುವ ಚಟುವಟಿಕೆಗಳ ವಿಶಿಷ್ಟ ಸಂಗ್ರಹವನ್ನು ಒಳಗೊಂಡಿರುವ 'ಐಡಿಯಾಸ್' ಪುಸ್ತಕವು ವಿಚಾರಗಳು, ಬೆಳವಣಿಯ ಹಂತಗಳಲ್ಲಿ ಮತ್ತು ಉನ್ನತ ಪ್ರೌಢಶಾಲೆಯ ವಿದ್ಯಾರ್ಥಿಗಳ ಆಲಿಸುವ ಮತ್ತು ಮಾತನಾಡುವ ಸಾಮರ್ಥ್ಯವನ್ನು ಬೆಳಸುವ ಗುರಿಯನ್ನು ಹೊಂದಿದೆ. ಎರಡು– ಎರಡು ಪುಸ್ತಕಗಳ ಸರಣಿಯು ಎರಡು ಕ್ಯಾಸೆಟ್ಗಳ ಗುಂಪಿನೊಂದಿಗೆ ಬಂದಿತು. ಅದರಲ್ಲಿ ಪಟ್ಟಿಮಾಡಲಾದ ಚಟುವಟಿಕೆಗಳನ್ನು ಕ್ಯಾಸೆಟ್ಗಳಿಲ್ಲದೆ ಭಾರತೀಯ ಸಂದರ್ಭದಲ್ಲಿ ತರಗತಿಯ ಆವಶ್ಯಕತೆಗಳಿಗೆ ತಕ್ಕಂತೆ ಅಳವಡಿಸಿಕೊಳ್ಳಬಹುದು.

ಪ್ರತಿಯೊಂದು ಚಟುವಟಿಕೆಯೂ ಭಾಷಾ ಅಭ್ಯಾಸವನ್ನು ಪ್ರೋತ್ಸಾಹಿಸುತ್ತದೆ, ಮತ್ತು ವಿದ್ಯಾರ್ಥಿಗಳ ನಿಜವಾದ ಸಂವಹನವನ್ನು ಒಳಗೊಂಡಿರುತ್ತದೆ, ಈ ಮೂಲಕವಾಗಿ ವಿದ್ಯಾರ್ಥಿಗಳು ಸಮಸ್ಯೆಗಳನ್ನು ಪರಿಹರಿಸಬಹುದು, ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಬಹುದು ಮತ್ತು ಪಾತ್ರಾಭಿನಯ ಮತ್ತು ಚರ್ಚೆಗಳಲ್ಲಿ ಭಾಗವಹಿಸಬಹುದು.

ಐಡಿಯಾಸ್ (ವಿದ್ಯಾರ್ಥಿಗಳ ಪುಸ್ತಕ) ಅನ್ನು ಒಟ್ಟು ಇಪ್ಪತ್ತೆರಡು ಘಟಕಗಲ್ಲಿ ವಿಂಗಡಿಸಲಾಗಿದೆ. ಇವು ವ್ಯಾಪಕವಾದ ವಿಷಯಗಳನ್ನು ಒಳಗೊಂಡಿವೆ.

ಉದಾಹರಣೆಗೆ 'ವೈಯಕ್ತಿಕ ಮಾಹಿತಿ', 'ಹವಾಮಾನ ಮತ್ತು ಹವಾಮಾನ', 'ವಿಚಿತ್ರ ವಿದ್ಯಮಾನ', 'ಸಾರಿಗೆ', 'ಆರೋಗ್ಯ', 'ತಂತ್ರಜ್ಞಾನ', 'ಭಾಷೆ ಮತ್ತು ಸಂವಹನ', ಮತ್ತು 'ಜಾಹೀರಾತು'.

ಪ್ರತಿಯೊಂದು ಘಟಕವು ಕನಿಷ್ಠ ಐದರಿಂದ ಎಂಟು ವಿದ್ಯಾರ್ಥಿ ಕೇಂದ್ರಿತ ಚಟುವಟಿಕೆಗಳನ್ನು ಹೊಂದಿದ್ದು, ವಿದ್ಯಾರ್ಥಿಗಳು ತಮ್ಮ ಆಲೋಚನೆಗಳು, ಅಭಿಪ್ರಾಯಗಳು ಮತ್ತು ಅನುಭವಗಳನ್ನು ಪರಸ್ಪರ ಹಂಚಿಕೊಳ್ಳಲು ಪ್ರೋತ್ಸಾಹಿಸುತ್ತದೆ.

ಸಹಜವಾಗಿ, 'ಪ್ರಚಲಿತ ವಿದ್ಯಮಾನಗಳು' ಘಟಕದ ಅಡಿಯಲ್ಲಿ ಪಟ್ಟಿಮಾಡಲಾದ ಕೆಲವು ಚಟುವಟಿಕೆಗಳನ್ನು ಪ್ರಚಲಿತ ಸುದ್ದಿಗಳಿಗೆ ಅನುಗುಣವಾಗಿ ಪ್ರತೀ ವರ್ಗಕ್ಕೂ

ಅಳವಡಿಸಿಕೊಳ್ಳಬೇಕಾಗುತ್ತದೆ, ಆದರೆ ಚಟುವಟಿಕೆಗಳ ಪ್ರಕಾರ (ಚಿತ್ರಗಳಿಗೆ ಶೀರ್ಷಿಕೆಗಳನ್ನು ಬರೆಯುವುದು; ಸಂಯೋಜಿತ ಚಿತ್ರಗಳಿಂದ ಕಥೆಗಳನ್ನು ರಚಿಸುವುದು) ಪಠ್ಯದಲ್ಲಿ ಉಲ್ಲೇಖಿಸಿರುವ ಉದಾಹರಣೆಗಳಿಗೂ ಸಹ ಇವು ಮಾನ್ಯವಾಗಿರುತ್ತವೆ.

ವ್ಯಾಪಕ ಶ್ರೇಣಿಯ ಛಾಯಾಚಿತ್ರಗಳು, ಜಾಹೀರಾತುಗಳು, ವ್ಯಂಗ್ಯಚಿತ್ರಗಳು ಮತ್ತು ನಕ್ಷೆಗಳು ಮತ್ತು ರೇಖಾಚಿತ್ರಗಳನ್ನು ಭಾಷೆಯನ್ನು ಕಲಿಯುವವರಿಗೆ ಮೌಖಿಕ / ಶ್ರವಣ ಕೌಶಲಗಳಿಗೆ ಅನುಕೂಲವಾಗುವಂತೆ ಉನ್ನತ ತರಗತಿಗಳಿಗಾಗಿ ಮಾರ್ಪಡಿಸಬಹುದು ಮತ್ತು ಬಳಸಬಹುದು. ಚಿತ್ರಗಳು, ರೇಖಾಚಿತ್ರಗಳು ಮತ್ತು ಆಕೃತಿಗಳ ಉದಾರವಾದ ಬಳಕೆ ಪುಸ್ತಕವನ್ನು ಅತ್ಯಂತ ಸ್ಪಷ್ಟವಾದ ಮತ್ತು ಮನರಂಜನಾತ್ಮಕ ಓದನ್ನಾಗಿ ಮಾಡುತ್ತದೆ.

ಅಧ್ಯಾಯಗಳಲ್ಲಿ ಉಲ್ಲೇಖಿಸಲಾದ ಕೆಲವು ಚಟುವಟಿಕೆಗಳು (ಉದಾಹರಣೆಗೆ ೨ನೇ ಅಧ್ಯಾಯ 'ನ್ಯೂ ಕ್ಲೋತ್ಸ್'ನಲ್ಲಿ (ಹೊಸ ಬಟ್ಟೆಗಳು) ಧ್ವನಿಮುದ್ರಿಕೆಗಳಲ್ಲಿನ ಮುದ್ರಣಗಳ ಜೊತೆಯಲ್ಲಿ ಮಾತ್ರ ಅರ್ಥಪೂರ್ಣವಾಗುತ್ತವೆ. ಆದರೆ ಅದೇನೇ ಇದ್ದರೂ, ಊಹೆ, ವಿಸ್ತರಣೆ ಮತ್ತು ಅಳವಡಿಸಿಕೊಳ್ಳುವುದರ ಮೂಲಕ, ಈ ಚಟುವಟಿಕೆಗಳಲ್ಲೂ ಸಹ ಕಲಿಯುವವರನ್ನು ಅವರ ಉದ್ದೇಶಿತ ಭಾಷೆಯಲ್ಲಿ ಮಾತನಾಡಲು ಮತ್ತು ಆಲಿಸುವಂತೆ ಪ್ರೋತ್ಸಾಹಿಸಲು ಬಳಸಬಹುದು.

ಎಲ್ಲ ಚಟುವಟಿಕೆಗಳು ಕಲಿಯುವವರನ್ನು ಗುಂಪಿನ ಮುಂದಾಳತ್ವಕ್ಕೆ ಶಿಫಾರಸು ಮಾಡುತ್ತವೆ ಮತ್ತು ಕಲಿಯುವವರು ಪ್ರಶ್ನೆಗಳಿಗೆ ಉತ್ತರಗಳನ್ನು ಪಡೆಯಲು ಜೊತೆಯಾಗಿ ಕೆಲಸ ಮಾಡಬೇಕಾಗುತ್ತದೆ (ಉದಾಹರಣೆಗೆ ೩ ನೇ ಅಧ್ಯಾಯದಲ್ಲಿ 'ಸ್ಪೀಕ್ ಅಬವ್ಟ್ ಯುವರ್ ಕಂಟ್ರಿ' (ನಿಮ್ಮ ದೇಶದ ಬಗ್ಗೆ ಮಾತನಾಡಿ); ಸಂದರ್ಭಗಳನ್ನು ಕಲ್ಪಿಸಲು (ನೀವು ಪ್ರವಾಹದಲ್ಲಿ ಸಿಲುಕಿದ್ದರೆ); ಸಂವಹನವನ್ನು ಆಲಿಸಲು ಮತ್ತು ವರದಿ ಮಾಡಲು (ದೂರದರ್ಶನದ ಪರಿವಿಡಿ, ಫೋನ್ ಸಂದೇಶಗಳು) ಇತ್ಯಾದಿ.

'ಸ್ಟ್ರೇಂಜರ್ ದ್ಯಾನ್ ಫಿಕ್ಷನ್'('ಕಲ್ಪಿತ ಕಥೆಗಿಂತ ವಿಲಕ್ಷಣ') ಎಂಬ ಘಟಕವು ಆಸಕ್ತಿದಾಯಕ ಚಟುವಟಿಕೆಗಳನ್ನು ಹೊಂದಿದೆ, ಇದು ವಿದ್ಯಾರ್ಥಿಗಳು ಒಟ್ಟಿಗೆ ಕುಳಿತು ಸತ್ಯ ಮತ್ತು ಸುಳ್ಳು ಹೇಳಿಕೆಗಳ ನಡುವಿನ ವ್ಯತ್ಯಾಸವನ್ನು ತಿಳಿಯಲು ಅನುವು ಮಾಡಿಕೊಡುತ್ತದೆ (i. ಪೆನ್ಸಿಲ್ ೫೬.೫ ಕಿ.ಮೀ ಉದ್ದದ ನಿರಂತರ ರೇಖೆಯನ್ನು ಬರೆಯಬಲ್ಲದು; ii. ಮಾನವರು ಕೇವಲ ನಾಲ್ಕು ರುಚಿಗಳನ್ನು ಗ್ರಹಿಸಬಲ್ಲರು; iii. ತಿಮಿಂಗಿಲವು ವಿಶ್ವದ ಅತಿದೊಡ್ಡ ಮೀನು). iv. ಪ್ರಶ್ನೆಗಳಿಗೆ ಉತ್ತರಗಳನ್ನು ನೀಡುವ ಮೂಲಕ ಶಿಕ್ಷಕರಿಗೆ ಪುಸ್ತಕವು ಸಿದ್ಧ ಉಲ್ಲೇಖಗಳಾಗಿ ಕಾರ್ಯನಿರ್ವಹಿಸುತ್ತದೆ (i. ತಪ್ಪು – ಉತ್ತರ ೫೫ ಕಿಮೀ; ii. ನಿಜ – ಸಿಹಿ, ಹುಳಿ, ಉಪ್ಪು ಮತ್ತು ಕಹಿ; iii. ಸುಳ್ಳು – ತಿಮಿಂಗಿಲವು ಸ್ತನಿ).

ಅವರು (ಆಕೆ/ಆತ) ಕೆಲವು ಚಟುವಟಿಕೆಗಳನ್ನು ಶಿಕ್ಷಕರು ಹೇಗೆ ಹೊಂದಿಕೊಳ್ಳಬಹುದು ಎಂಬುದರ ಕುರಿತು ಅವರಿಗೆ ಸೂಚನೆಗಳನ್ನು ನೀಡುತ್ತದೆ ಮತ್ತು ಗುಂಪುಗಳಲ್ಲಿ ಕೆಲಸಮಾಡಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತದೆ. ಉದಾಹರಣೆಗೆ ಶಿಕ್ಷಕರು ವಿದ್ಯಾರ್ಥಿಗಳನ್ನು ಸಾಂಸ್ಕೃತಿಕ ನಿರ್ದಿಷ್ಟತೆಯಲ್ಲಿ ಮೂಢನಂಬಿಕೆಗಳ ಬಗ್ಗೆ ಚರ್ಚಿಸಲು ಬಹುಸಾಂಸ್ಕೃತಿಕ ಗುಂಪುಗಳಾಗಿ ವಿಂಗಡಿಸಬಹುದು, ಉದಾಹರಣೆಗೆ ಏಣಿಯ ಕೆಳಗೆ ನಡೆಯುವುದನ್ನು ತಪ್ಪಿಸುವುದು, ಯಾರೊಬ್ಬರ ಹಾದಿಯಲ್ಲಿ ಕಪ್ಪುಬೆಕ್ಕು ದಾಟಿದಾಗ ನಿಲ್ಲುವುದು, ಹರಕೆಗಾಗಿ ಕಾರಂಜಿಯಲ್ಲಿ ನಾಣ್ಯವನ್ನು ಎಸೆಯುವುದು ಇತ್ಯಾದಿ. ಶಿಕ್ಷಕರ ಪುಸ್ತಕದಲ್ಲಿ ಪ್ರತೀ ಘಟಕಕ್ಕೆ ಮುಂಚೆ ಶಬ್ದಕೋಶದ ವಿಭಾಗವಿರುತ್ತದೆ. ಈ ಘಟಕವು ವಿದ್ಯಾರ್ಥಿಗಳ ದಾಖಲುಗಳು ಮತ್ತು ಲಿಖಿತ ಕೆಲಸಕ್ಕಾಗಿ ಪ್ರತಿಲೇಖನ ಸಲಹೆಗಳನ್ನು ಹೊಂದಿದೆ.

* * *

**ಚಿಂತನಾತ್ಮಕ ಪ್ರಶ್ನೆಗಳು:**

೧. ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತಗಳಲ್ಲಿ ವಿದ್ಯಾರ್ಥಿಗಳ ಸಂವಹನ ಕೌಶಲಗಳ ಮೇಲೆ ಕೇಂದ್ರೀಕರಿಸುವ ಹಾಗೆ ನಮ್ಮ ಶಾಲೆಯಲ್ಲಿನ ಭಾಷಾ ಬೋಧನೆಯು ಇದೆಯೇ?

೨. ಭಾಷಾಬೋಧನಾ ಶಿಕ್ಷಕರಾಗಿ ನೀವು ನಿಮ್ಮ ತರಗತಿಗಳಲ್ಲಿ ಮಾತನಾಡುವ ಮತ್ತು ಆಲಿಸುವ ಕೌಶಲವನ್ನು ಉತ್ತೇಜಿಸಲು ಕೈಗೊಳ್ಳುವ ಚಟುವಟಿಕೆಗಳು ಯಾವುವು?

೩. ವಿದ್ಯಾರ್ಥಿಗಳ ಸಾಂಸ್ಕೃತಿಕ ಹಿನ್ನೆಲೆಯನ್ನು ಮನದಲ್ಲಿಟ್ಟುಕೊಂಡು ತರಗತಿಯ ಬೋಧನಾ ಪ್ರಕ್ರಿಯೆಯಲ್ಲಿ ಮಾತನಾಡುವುದು ಹಾಗೂ ಆಲಿಸುವ ಕೌಶಲಗಳನ್ನು ಹೇಗೆ ಸಂಯೋಜಿಸುವಿರಿ?

**ಸುರಂಜನಾ ಬರುವಾ:** ದೆಹಲಿಯ ವಿಶ್ವವಿದ್ಯಾಲಯದಿಂದ ಭಾಷಾಶಾಸ್ತ್ರದಲ್ಲಿ ಪಿಎಚ್.ಡಿ., ಹೊಂದಿದ್ದಾರೆ, ಪ್ರಸ್ತುತ ಅಸ್ಸಾಂ ಸ್ಟಡೀಸ್, ತೇಜ್ಪುರ್ ವಿಶ್ವವಿದ್ಯಾಲಯ, ಅಸ್ಸಾಂನ ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದಾರೆ. ಸಂಭಾಷಣೆ/ಸಂಕಥನ ವಿಶ್ಲೇಷಣೆ, ಭಾಷಾ ಬೋಧನೆ, ಲಿಂಗತ್ವದ ಅಧ್ಯಯನಗಳು ಮತ್ತು ಭಾಷಾಂತರ ಅಧ್ಯಯನಗಳು ಅವರ ಆಸಕ್ತಿಯ ಕ್ಷೇತ್ರಗಳಾಗಿವೆ. suranjana.barua@gmail.com

**ಅನುವಾದ:** ಕಾರ್ತಿಕ್ ಕೆ / **ಪರಿಶೀಲನೆ:** ದೇವಕಿ ಲಕ್ಷ್ಮೀನಾರಾಯಣ್

**ಮೂಲ:** *Language and Language Teaching,* Volume 1 Number 2 Issue 4, July 2013.

❑